ಜೊತೆಗೆ, ಸರ್ಕಾರದ ಆದಾಯದ ಮೇಲೆ ಈಗಿರುವ ಯೋಜನೇತರ ವೆಚ್ಚವನ್ನು ಕಡಿಮೆ ಮಾಡುವ ಕಾರಣಕ್ಕಾಗಿ ಆಡಳಿತ ಸುಧಾರಣಾ ಸಮಿತಿ ಶ್ರೀ ಹಾರನಹಳ್ಳಿ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿರುವ ಒಂದು ಸಮಿತಿ ಕೊಟ್ಟಿರುವ ಶಿಫಾರಸ್ಸು ಇದೆ, ಅನುತ್ಪಾದಿಕವಾಗಿರತಕ್ಕಂಥ ವೆಚ್ಚದ ಮೇಲೆ ಕಡಿವಾಣ ಮತ್ತು ಈ ರೀತಿ ಯೋಜನೇತರ ವೆಚ್ಚದ ಮೇಲೆ ಇರತಕ್ಕ ನಿಯಂತ್ರಣ ಇವು ಬರಬೇಕೆಂದು ಹೇಳಿದಾಗ, ಎಲ್ಲೆಲ್ಲಿ ಖಾಲಿ ಹುದ್ದೆಗಳಿವೆ, ಆ ಖಾಲಿ ಹುದ್ದೆಗಳ ಶೇಕಡ 80ರಷ್ಟನ್ನು ನೇಮಕಾತಿ ಮಾಡಬಾರದೆಂದು ಹೇಳಿ, ಕಾನೂನು ಮಾಡಬಾರದೆಂದು ಹೇಳಿ, ಕಾನೂನು ಸುಧಾರಣಾ ಇಲಾಖೆ ಕೊಟ್ಟಿರುವ ವರದಿಯನ್ನು ನಾವು ಅಂಗೀಕರಿಸಿದ್ದೇವೆ. ಆ ಹಿನ್ನೆಲೆಯಲ್ಲಿ ಬಹಳ ಕಷ್ಟ ಬರುತ್ತದೆ. ನಾನೂ ಕೂಡ ಈ ವಿಚಾರದಲ್ಲಿ ಸಹಮತ ವ್ಯಕ್ತಪಡಿಸುತ್ತೇನೆ. ಒಂದು ಸುಖೀ ರಾಜ್ಯದ ಕಲ್ಪನೆ ಬಂದಾಗ, ಎಲ್ಲರಿಗೂ ಕೂಡ, ಒಳ್ಳೆಯ ಬದುಕನ್ನು ಕೊಡಬೇಕಾಂಥದ್ದು ಸರ್ಕಾರದ ಮತ್ತು ಸಮಾಜ ಕರ್ತವ್ಯವಿರುತ್ತದೆ. ಆದರೆ, ಇವತ್ತಿನ ನಮ್ಮ ಸಂಪನ್ಮೂಲಗಳ ಇತಿಮಿತಿಗಳಲ್ಲಿ 17 ಸಾವಿರಕ್ಕಿಂತ ಹೆಚ್ಚು ಜನರನ್ನು ನೇಮಕಾತಿ ಮಾಡುವುದರಿಂದ, ಈ ಎಲ್ಲ ಸಮಸ್ಯೆಗಳಿಗೆ ಪಾಲುದಾರರಾಗುತ್ತೇವೆ. ಈ ಕಾರಣಕ್ಕಾಗಿ, ಈ ವಿಚಾರದಲ್ಲಿ ಸಂಪೂರ್ಣವಾದ ಮಾನವೀಯ ದೃಷ್ಟಿಕೋಣ ಈ ಸರ್ಕಾರಕ್ಕಿದೆ. ಅವರನ್ನು ನೇಮಕಾತಿ ಮಾಡಬೇಕೆನ್ನುವ ಸಂಪೂರ್ಣವಾದ ರಾಜಕೀಯ ಇಚ್ಛಾಶಕ್ತಿ ಇದೆ. ಆದರೆ, ಈ ಎಲ್ಲಾ ನಿಯಮಗಳು ನಮಗೆ ಅಡ್ಡಿ ಬರುತ್ತಿದೆ. ಈ ನಿಯಮಗಳನ್ನು ಪರಿಹರಿಸಲಿಕ್ಕೆ ದಿನಾಂಕ : 3.8.04ರಿಂದ ನಡೆಯಲಿರುವ ವಿಚಾರಣೆಯಲ್ಲಿ ತೀರ್ಮಾನವೇನು ಬರುತ್ತದೆಂದು ನೋಡುತ್ತೇವೆ. ಎರಡನೆಯದಾಗಿ, ಸಂಪನ್ಮೂಲಗಳ ಇತಿ-ಮಿತಿಯಲ್ಲಿ ಹೇಗೆ ಮಾಡಬೇಕೆನ್ನುವುದನ್ನು ಮಾಡಿಕೊಂಡು ಕ್ರಮವನ್ನು ಕೈಗೊಳ್ಳುತ್ತೇವೆ.

ಅಧ್ಯಕ್ಷರು : ಈಗ ಸದನವನ್ನು 3 ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 5 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)

(ಸದನವು 3 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು)

(ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು : ಈಗ ಗಮನಸೆಳೆಯುವ ಸೂಚನೆಗಳು.

(III) ವಿಷಯ : ಉಡುಪಿ ಜಿಲ್ಲೆಯ ಮಂದರ್ತಿ ದೇವಸ್ಥಾನದ ಯಕ್ಷಗಾನ ಮೇಳದಲ್ಲಿ ಬಿಲ್ಲವ ಸಮೂದಾಯಕ್ಕೂ ಅವಕಾಶ ನೀಡುವ ಬಗ್ಗೆ.

ಶ್ರೀ ಕೆ. ರಘುಪತಿ ಭಟ್ (ಉಡುಪಿ) : ಮಾನ್ಯ ಅಧ್ಯಕ್ಷರೆ, ಉಡುಪಿ ಜಿಲ್ಲೆಯ ಮಂದರ್ತಿ ದೇವಸ್ಥಾನದ ಯಕ್ಷಗಾನ ಮೇಳದಲ್ಲಿ ಬಿಲ್ಲವ ಸಮೂದಾಯಕ್ಕೂ ಅವಕಾಶ ನೀಡುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

† **ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕಾ ಸಚಿವರು)** : ಶ್ರೀ ಎಂ.ಪಿ. ಪ್ರಕಾಶ್, ಕಂದಾಯ ಸಚಿವರ ಪರವಾಗಿ, ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕಾ ಸಚಿವರು) (ಶ್ರೀ ಎಂ.ಪಿ. ಪ್ರಕಾಶ್ ರವರ ಪರವಾಗಿ): ಉಡುಪಿ ತಾಲ್ಲೂಕು, ಮಂದಾರ್ತಿ ಶ್ರೀ ದುರ್ಗಾಪರಮೇಶ್ವರಿ ದೇವಾಲಯದ ಆಡಳಿತ ಮಂಡಳಿಯವರು ಬಿಲ್ಲವ ಜನಾಂಗದ ಕಲಾವಿದರಿಗೆ ಮೇಳದಲ್ಲಿ ಪಾತ್ರದಾರಿಗಳಾಗಿ ಸೇವೆ ಸಲ್ಲಿಸಲು ಇದುವರೆವಿಗೂ ಅವಕಾಶ ನೀಡುತ್ತಿಲ್ಲವಾದ್ದರಿಂದ ಈ ಸಮಸ್ಯೆಯನ್ನು ಬಗೆಹರಿಸಿ, ಸಾಮಾಜಿಕ ನ್ಯಾಯವನ್ನು ಬಿಲ್ಲವ ಸಮಾಜಕ್ಕೆ ಒದಗಿಸಿ ಕೊಡಲು ಬಿಲ್ಲವ ಮಹಾ ಮಂಡಲದವರು ಕೋರಿರುತ್ತಾರೆ. ಉಡುಪಿ ತಾಲ್ಲೂಕು, ಮಂದಾರ್ತಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ವತಿಯಿಂದ ನಡೆಸಲಾಗುತ್ತಿರುವ ಯಕ್ಷಗಾನ ಬಯಲಾಟ ಸೇವೆ ಒಂದು ಕಾಲಾ ಸೇವೆಯಾಗಿದ್ದು ದೇವಾಲಯದ ಹೊರಾಂಗಣದಲ್ಲಿ ಈ ಸೇವೆಯು ನಡೆಯುತ್ತದೆ ಉಡುಪಿ ಜಿಲ್ಲೆಯ ಎಲ್ಲಾ ಜನಾಂಗದವರು ಯಕ್ಷಗಾನ ಕಲೆಯಲ್ಲಿ ಸಕ್ರಿಯವಾಗಿ ಭಾಗವಹಿಸುವುದು ರೂಢಿಯಲ್ಲಿದೆ. ಯಕ್ಷಗಾನ ಮೇಳದಲ್ಲಿ ಯಾವುದೇ ಒಂದು ಜನಾಂಗದವರು ಮಾತ್ರ ಇಂಥದ್ದೆ ಪಾತ್ರಗಳನ್ನು ಮಾಡಬೇಕು ಎಂಬ ಬಗ್ಗೆ ಉಲ್ಲೇಖವಿರುವುದಿಲ್ಲ. ಈ ದೇವಾಲಯದಲ್ಲಿ ಯಕ್ಷಗಾನ ಹರಿಕೆಯ ರೂಪದಲ್ಲಿ ನಡೆಸುತ್ತಿರುವ ಈ ಸೇವೆಯಾದರೂ ಸಹ ಈ ಸೇವೆಯು ಯಕ್ಷಗಾನ ಕಲೆಗೆ ಪ್ರೋತ್ಸಾಹ ನೀಡುವ ಸಲುವಾಗಿ ನಡೆಸುತ್ತಿರುವ ಸೇವೆಯಂದೇ ಭಾವಿಸಬೇಕಾಗುತ್ತದೆ. ಈ ರೀತಿಯ ಯಕ್ಷಗಾನ ಕಲೆಯು ಮಂಗಳೂರು ಮತ್ತು ಉಡುಪಿ ಜಿಲ್ಲೆಯ ಹಲವಾರು ದೇವಸ್ಥಾನಗಳಲ್ಲಿ ವಾಡಿಕೆಯಲ್ಲಿದೆ. ಈ ಕಾರಣಗಳಿಂದ ಮಂದಾರ್ತಿ ದೇವಾಲಯದಲ್ಲಿ ನಡೆಯುವ ಯಕ್ಷಗಾನ ಸೇವೆಯನ್ನು ಯಾವುದೇ ಒಂದು ಜನಾಂಗದವರನ್ನು ಹೊರತುಪಡಿಸುವುದು ಸೂಕ್ತವಲ್ಲ. ಹಾಗೂ ಈ ರೀತಿ ಹೊರತುಪಡಿಸಿದ್ದಲ್ಲಿ ಇದು ಜಾತಿಜನಾಂಗದ ಆಧಾರದ ಮೇಲೆ ತಾರತಮ್ಯ ತೋರಿಸುವ ಕೃತ್ಯವಾಗಿರುತ್ತದೆ. ಯಕ್ಷಗಾನ ಕಾಲ ಸೇವೆಯು ಕಲೆಗೆ ಪ್ರೋತ್ಸಾಹ ನೀಡುವ ದೇವಸ್ಥಾನದ ಹೊರಾಂಗಣದಲ್ಲಿ ನಡೆಯುವ ಸೇವೆಯಾದುದರಿಂದ ಹಿಂದೂ ಧಾರ್ಮಿಕ ದತ್ತಿ ಸಂಸ್ಥೆಗಳು ಮತ್ತು ಧರ್ಮದಾಯದತ್ತಿಗಳ ಕಾಯ್ದೆ ಕಲಂ 58ರ ಪರಿಭಾಷೆಯಲ್ಲಿ ವಿವರಿಸಿರುವ ಸೇವೆಗಳು, ಪದ್ಧತಿಗಳು, ಆಚರಣೆಗಳ ವ್ಯಾಪ್ತಿಯಲ್ಲಿ ಬರುವುದಿಲ್ಲ, ಈ ಕಾರಣದಿಂದ ಹಾಗೂ ಸಾಮಾಜಿಕ ತಾರತಮ್ಯವನ್ನು ನಿವಾರಿಸುವ ಸಂಬಂಧದಲ್ಲಿ ಸಂಸ್ಥೆಗೆ ಸೂಕ್ತವಾದ ಸಂಪ್ರದಾಯ ಆಚರಣೆ ಸಮಾರಂಭ ಪದ್ಧತಿಗಳಲ್ಲಿ ಹಸ್ತಕ್ಷೇಪ ಮಾಡತಕ್ಕದಲ್ಲ ಮತ್ತು ಅವುಗಳನ್ನು ಪಾಲಿಸತಕ್ಕದ್ದು ಎಂದು ತಿಳಿಸಲಾಗಿದೆ. ಈ ದೇವಸ್ಥಾನದಲ್ಲಿ ಯಕ್ಷಗಾನ ಹರಿಕೆಯ ರೂಪದಲ್ಲಿ ನಡೆದಿದ್ದರೂ ಸೇವೆಯಾದರೂ ಸಹ ಈ ಸೇವೆಯು ಯಕ್ಷಗಾನ ಕಲೆಗೆ ಪ್ರೋತ್ಸಾಹ ನೀಡುವ ಸಲುವಾಗಿ ನಡೆಸುತ್ತಿರುವ ಸೇವೆಯೆಂದೇ ಭಾವಿಸಬೇಕಾಗುತ್ತದೆ. ಈ ರೀತಿ ಯಕ್ಷಗಾನ ಸೇವೆಯು ಮಂಗಳೂರು ಮತ್ತು ಉಡುಪಿ ಜಿಲ್ಲೆಯ ಹಲವಾರು ದೇವಸ್ಥಾನಗಳಲ್ಲಿ ವಾಡಿಕೆಯಲ್ಲಿದೆ, ಈ ಕಾರಣಗಳಿಂದಾಗಿ ಮಂದಾರ್ತಿ ದೇವಾಲದಯಲ್ಲಿ ನಡೆಯುವ ಯಕ್ಷಗಾನ ಸೇವೆಯಿಂದ ಯಾವುದೇ ಒಂದು ಜನಾಂಗದವರನ್ನು ಹೊರತುಪಡಿಸುವುದು ಸೂಕ್ತವಲ್ಲ, ಈ ಕಾರಣದಿಂದ ಅದು ಸಾಮಾಜಿಕ

ತಾರತಮ್ಯವನ್ನು ನಿವಾರಿಸುವ ಜವಾಬ್ದಾರಿ ಸರ್ಕಾರದ ಆದ್ಯಕರ್ತವ್ಯವಾದ್ದರಿಂದ ಮಂದಾರ್ತಿ ಶ್ರೀ ದುರ್ಗಾಪರಮೇಶ್ವರಿ ದೇವಾಲಯದ ಯಕ್ಷಗಾನ ಮೇಳದಲ್ಲಿ ಎಲ್ಲಾ ಜನಾಂಗದವರಿಗೂ ಭಾಗವಹಿಸಲು ಅವಕಾಶ ನೀಡುವಂತೆ ದೇವಾಲಯದ ಆಡಳಿತ ಮಂಡಳಿಗೆ ಹಾಗೂ ಸರ್ಕಾರದ ನೀತಿಯನ್ನು ಕಾರ್ಯಗೊಳಿಸಲು ಜಿಲ್ಲಾಧಿಕಾರಿಯವರಿಗೆ ದಿನಾಂಕ 19.7.2004ರ ಪತ್ರದಲ್ಲಿ ನಿರ್ದೇಶನ ನೀಡಲಾಗಿದೆ.

ಶ್ರೀ ಕೆ. ರಘುಪತಿಭಟ್ : ಮಾನ್ಯ ಅಧ್ಯಕ್ಷರೆ, ಈಗ ಬಂದ ಉತ್ತರದಲ್ಲಿ ಸಮರ್ಪಕವಾದ ಉತ್ತರ ಇದೆ. ಆದರೆ ಲಿಖಿತವಾಗಿ ಕೊಟ್ಟಿದ್ದರಲ್ಲಿ ಸರಿಯಾಗಿ ಇರಲಿಲ್ಲ, ಸರ್ಕಾರ ಈ ಮಂದಾರ್ತಿ, ಮೇಳದಲ್ಲಿ ಬಿಲ್ಲವರಿಗೆ ಅವಕಾಶ ಮಾಡಿಕೊಡುವುದಕ್ಕೆ ಸೂಕ್ತವಾದ ನಿರ್ದೇಶನವನ್ನು ನೀಡಿದ್ದಕ್ಕೆ ಸರ್ಕಾರವನ್ನು ಅಭಿನಂದಿಸುತ್ತೇನೆ. ಆದರೆ ಇಲ್ಲಿ ಚಿಂತಿಸುವಂಥ ಇನ್ನೊಂದು ಘಟನೆ ಇದೆ. ಈಗಾಗಲೇ ದಿ : 11.2.2004 ರಂದು ಬಿಲ್ಲವ ಸಮಾಜದ ಒಬ್ಬ ಕಲಾವಿದರಾದಂಥ ಐರೋಡಿಗೋವಿಂದಪ್ಪನವರು ಸಾಮಾಜಿಕ ಎಲ್ಲಾ ಕಾರ್ಯಕರ್ತರೊಂದಿಗೆ ಧರಣಿ ಕುಳಿತುಕೊಂಡಿದ್ದ ಸಂದರ್ಭದಲ್ಲಿ ಆಗಿನ ಉಸ್ತುವಾರಿ ಸಚಿವರಾದಂಥ ಮಾನ್ಯ ವಸಂತಸಾಲಿಯಾನರವರು ಬಂದು ಜಿಲ್ಲಾಧಿಕಾರಿಗಳು ಒಂದು ಆದೇಶವನ್ನು ಕೊಟ್ಟಿದ್ದರು. ಅದು 11.2.2004ರಂದು. ಆದೇಶದ ಸಂಖ್ಯೆ ಡಿ.ಹೆಚ್.ಎ.ಡಿ.ಎಂ.ಸಿ.ಆರ್.ಸಿ: 79:2003–04. ಜಿಲ್ಲಾಧಿಕಾರಿಯವರು ಈಗಾಗಲೇ 11.2.2004ರಂದು ಬಿಲ್ಲವರಿಗೆ ಅಲ್ಲಿ ಅವಕಾಶವನ್ನು ಮಾಡಿಕೊಡಬೇಕು ಎಂದು ಆದೇಶವನ್ನು ಕೊಟ್ಟಿದ್ದರೂ ಆ ಆಡಳಿತ ಮಂಡಳಿ ಆ ಆದೇಶವನ್ನು ಪರಿಗಣನೆಗೆ ತೆಗೆದುಕೊಳ್ಳಲಿಲ್ಲ. ಸಮಸ್ಯೆ ಏನು ಎಂದರೆ ಅಲ್ಲಿರುವ ಆಡಳಿತ ಮಂಡಳಿ ಸಹ ಪರಿಪೂರ್ಣವಾದ ಆಡಳಿತ ಮಂಡಲಿಯಲ್ಲ, ಕೇವಲ ಮೂರು ಜನ ಮಾತ್ರ ಇರುವಂಥ ಆಡಳಿತ ಮಂಡಳಿ ಸರ್ಕಾರದ ಆದೇಶಗಳನ್ನು ಪಾಲನೆ ಮಾಡದೆ ಇರುವಂಥ ಆಡಳಿತ ಮಂಡಳಿಯಾಗಿದೆ. ಈ ಮೊದಲು ಜಿಲ್ಲಾಧಿಕಾರಿಯವರು ಕೊಟ್ಟಂಥ ಆದೇಶನ್ನೂ ಅವರು ಪರಿಪಾಲನೆಮಾಡಲಿಲ್ಲ, ಆದ್ದರಿಂದ ತಕ್ಷಣ ಎರಡು ಮೂರು ದಿವಸಗಳ ಒಳಗೆ ಈ ವ್ಯವಸ್ಥೆಯನ್ನು ಮಾಡಬೇಕು. ಅದರಲ್ಲಿ ವಿಶೇಷವಾಗಿ ಐರೊಡಿಗೋವಿಂದಪ್ಪ ಎನ್ನುವ ರಾಜ್ಯಪ್ರಶಸ್ತಿ ವಿಜೇತ ಕಲಾಗಾರರ ಮೇಲೆ ಪೂರ್ವಗ್ರಹಪೀಡಿತರಾಗಿ ಈ ಕಲೆಯಲ್ಲಿ ಅವರು ಭಾಗವಹಿಸಬಾರದು ಎಂಬ ನಿಲುವನ್ನು ಅವರು ತೆಗೆದುಕೊಳ್ಳುತ್ತಿದ್ದಾರೆ. ಈಗಾಗಲೇ ಸರ್ಕಾರ ಕೊಟ್ಟಂಥ ಉತ್ತರದಲ್ಲಿ ಯಕ್ಷಗಾನ ಬಯಲಾಟ ಸೇವೆ ಎಂದು ಹೇಳುತ್ತಿದ್ದಾರೆ. ಇಂತಹ ಯಕ್ಷಗಾನ ಬಯಲಾಟ ಬರೀ ಮಂದರ್ತಿ ಮೇಳದಲ್ಲಿ ಮಾತ್ರವಲ್ಲ ಸುಮಾರು ಮೇಳದಲ್ಲಿ ಇಂತಹ ಕಲೆ ನಡೆಯುತ್ತಿದೆ. ಉದಾಹರಣೆಗೆ ನಮ್ಮ ಧರ್ಮಸ್ಥಳದ ಮಂಜನಾಥೇಶ್ವರ ಯಕ್ಷಗಾನ ಮಂಡಳಿಯಲ್ಲಿಯು ಇಂಥ ಸೇವೆಯನ್ನು ಮಾಡುವ ಪರಿಪಾಠವಿದೆ, ಅಲ್ಲಿ ಇಂತಹ ಯಾವುದೇ ಸಮಸ್ಯೆಗಳಿಲ್ಲ, ಕೇವಲ ಮಂದರ್ತಿಯಲ್ಲಿ ಮಾತ್ರ ಕೇವಲ ಪೂರ್ವಾಗ್ರಹಪೀಡಿತರಾಗಿ ಮಾಡುತ್ತಿದ್ದಾರೆ ಅಷ್ಟೆ ಇತ್ತೀಚೆಗೆ ಪೇಜಾವರದ ಶ್ರೀಪಾದರು ಕೂಡ ಅದರ ಬಗ್ಗೆ ಸ್ಪಷ್ಟವಾಗಿ ಇದು ಆಗಮನ

ಶಾಸ್ತ್ರದ ಪ್ರಕಾರ ಯಕ್ಷಗಾನ ಮೇಳಕ್ಕೆ ಯಾವುದೇ ಸಂಪ್ರದಾಯ ಬರುವುದಿಲ್ಲವೆಂದು ಹೇಳಿದರು, ಯಕ್ಷಗಾನಮೇಳ ಎಂಬುದೊಂದು ಕಲೆ, ಕೇವಲ ಸೇವೆಗೋಸ್ಕರ ಮಾಡುವಂತಹದ್ದಲ್ಲ, ನಮ್ಮ ದಕ್ಷಿಣಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಗಳಲ್ಲಿ, ಅದೊಂದು ಕಲೆ, ಕಲೆ ಎಂಬುದನ್ನು ಯಾವುದೇ ಒಂದು ಜನಾಂಗಕ್ಕೆ ಅವಕಾಶ ಮಾಡಿಕೊಡದಿರುವುದು ಬಹಳ ತಪ್ಪು. ಇದಕ್ಕಿಂತ ಮುಂಚೆ ಸಾಕಷ್ಟು ಆಚರಣೆಗಳಿದ್ದವು, ನಾವು ಇಪ್ಪತ್ತೊಂದನೆ ಶತಮಾನದಲ್ಲಿ ಇದ್ದೇವೆ ಇವತ್ತು ಸಾಕಷ್ಟು ಬದಲಾವಣೆಗಳಾಗಿರುವ ಸಮಯದಲ್ಲಿ ಸರ್ಕಾರ ಆ ಬಗ್ಗೆ ಸೂಕ್ತವಾದ ಕ್ರಮ ಕೈಗೊಳ್ಳಬೇಕು. ಸರ್ಕಾರದಿಂದ ಅದನ್ನು ನಾವು ಒತ್ತಾಯ ಮಾಡಿದ್ದೇವೆಂದು ಹೇಳಿದ್ದಾರೆ, ಆದರೆ ನನ್ನ ವಿನಂತಿ ಏನೆಂದರೆ, ಇದನ್ನು ಅನುಷ್ಠಾನಗೊಳಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಈಗಾಗಲೇ, ಬೇರೆ ಆದೇಶಗಳು ಬಂದಾಗಲೂ ಆಡಳಿತ ಮಂಡಳಿಯವರು ಅನುಷ್ಠಾನಕ್ಕೆ ಅದನ್ನು ತರುವುದನ್ನು ಮಾಡಿರಲಿಲ್ಲ. ಈ ಆದೇಶವನ್ನೂ ಕೂಡ ಅವರು ಅನುಷ್ಠಾನಕ್ಕೆ ತರುತ್ತಾರೆ ನಮಗೆ ನಂಬಿಕೆ ಇಲ್ಲ. ಆದುದರಿಂದ ಆ ಬಗ್ಗೆ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಂಡು ತಮ್ಮ ಆದೇಶ ಏನಿದೆ ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಏಕೆಂದರೆ ನಮ್ಮ ಜಿಲ್ಲೆಯಲ್ಲಿ ಜನಾಂಗ ಜನಾಂಗದ ಮಧ್ಯೆ ಇದೊಂದು ಕಾರಣದಿಂದ ವೈಷಮ್ಯಗಳು ಹುಟ್ಟುವಂತಹ ಬೆಳವಣಿಗೆ ನಡೆಯುತ್ತಿದೆ. ಈ ರೀತಿಯ ಪರವಿರೋಧ ಹೇಳಿಕೆಗಳನ್ನು ಕೊಡುವುದರಿಂದ ವಾತಾವರಣ ಹದಗೆಡುತ್ತಿದೆ. ಆದುದರಿಂದ ಎರಡು ಮೂರು ದಿವಸಗಳೊಳಗಾಗಿ ಸರ್ಕಾರ ವಿಶೇಷ ಆಸಕ್ತಿಯನ್ನು ತೆಗೆದುಕೊಂಡು ಸರ್ಕಾರ ಕೊಟ್ಟ ಆದೇಶವನ್ನು ಅನುಷ್ಠಾನಗೊಳಿಸುವುದಕ್ಕೆ ಪ್ರಯತ್ನ ಪಡಬೇಕು, ಸರ್ಕಾರ ಉತ್ತರದಲ್ಲಿ ಏನು ಹೇಳಿದೆ ಅದನ್ನು ಜಾರಿಗೆ ತರಬೇಕು, ಈ ಆದೇಶ ಕೊಟ್ಟಿದ್ದಕ್ಕೆ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ.

ಶ್ರೀ ಕೆ. ಪ್ರಭಾಕರಬಂಗೇರ(ಬೆಳ್ತಂಗಡಿ) : ಮಾನ್ಯ ಅಧ್ಯಕ್ಷರೆ, ಮಂದರ್ತಿಮೇಳ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿರುವ ದೇವಸ್ಥಾನಗಳಲ್ಲಿ ಹರಕೆಯನ್ನು ಹೊತ್ತುಕೊಂಡು ಆ ಮೇಳಗಳನ್ನು ನಡೆಸುತ್ತಿದ್ದಾರೆ. ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಏನೊಂದು ಮಂದರ್ತಿ ಯಕ್ಷಗಾನ ಮೇಳ ನಡೆಯುತ್ತಿದೆ ಅಲ್ಲಿ ಮಾತ್ರ ಬಿಲ್ಲವ ಸಮಾಜದವರಿಗೆ ಅವಕಾಶವಿಲ್ಲದಿರುವುದನ್ನು ನಾವು ಗಮನಿಸಿರಬಹುದು, ಈಗಾಗಲೇ ಈಗಾಗಲೇ 251ರ ಉತ್ತರ ಪ್ರಕಾರ ಸಂಸದೀಯ ಸಚಿವರು, ಬಿಲ್ಲವ ಜನಾಂಗದವರಿಗೆ ದೇವಳದಲ್ಲಿ ಚಾಕರಿಗೆ ನಿಗದಿಯಾಗಿರುವುದಿಲ್ಲ ಅದರಲ್ಲೂ ದೇವಾಲಯದ ಆಡಳಿತಮಂಡಳಿ ಅರ್ಚಕರು ಮತ್ತು ತಂತ್ರಿಗಳು ಬಿಲ್ಲವ ಜನಾಂಗಕ್ಕೆ ಯಕ್ಷಗಾನ ಸೇವೆಗೆ ಅವಕಾಶ ಕಲ್ಪಿಸುವುದು ದೇವಾಲಯದ ಸಂಪ್ರದಾಯಕ್ಕೆ ವಿರುದ್ಧವಾಗಿದೆ ಎನ್ನುವ ನಿಲುವನ್ನು ತಾಳಿರುತ್ತಾರೆ ಎಂದು ಹೇಳಿದ್ದಾರೆ. ಈ 21ನೇ ಶತಮಾನದಲ್ಲಿ ಕೂಡ ಈ ಬಿಲ್ಲವ ಜನಾಂಗದವರಿಗೆ ನೂರು ವರ್ಷಗಳ ಹಿಂದೆ ನೋಡಿದಾಗ, ದೇವಸ್ಥಾನಕ್ಕೆ ಪ್ರವೇಶವಿಲ್ಲದಿರುವುದನ್ನು ನಾವು ಕಂಡಿದ್ದೇವೆ, ಆದರೆ ಈ ದಿವಸಗಳಲ್ಲಿ ಎಲ್ಲಾ ಜನಾಂಗದವರು ದೇವಸ್ಥಾನದ

ಒಳಗಡೆ ಹೋಗುವ ಸಂಪ್ರದಾಯವಿದ್ದರೂ ಕೂಡ ಈ ಒಂದು ದೇವಸ್ಥಾನದಲ್ಲಿ ಬಿಲ್ಲವ ಜನಾಂಗದ ಕಲಾವಿದರಿಗೆ ಅವಕಾಶವಿಲ್ಲವೆಂದು ಹೇಳುವುದು ಸರಿಯಾದ ಕ್ರಮವಲ್ಲ. ಸಾಮಾಜಿಕ ನ್ಯಾಯ ಸಿಕ್ಕಂಥಂತಾಗುವುದಿಲ್ಲ. ಈಗಾಗಲೇ ಸರ್ಕಾರ ಕೊಟ್ಟಿರುವ ಉತ್ತರದ ಪ್ರಕಾರ ಆದೇಶದಂತೆ ಜಾರಿ ಮಾಡುತ್ತದೆ ಎನ್ನುವ ವಿಚಾರವನ್ನು ಹೇಳಿದ್ದಾರೆ, ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದು ಮಾತ್ರವಲ್ಲ, ಈಗಾಗಲೇ ಹೇಳಿದಂತೆ ಅಲ್ಲಿಯ ಆಡಳಿತಮಂಡಳಿ ದತ್ತಿಇಲಾಖೆಯ ಪ್ರಕಾರ ಕ್ರಮಬದ್ಧವಾಗಿಲ್ಲ. ಅದನ್ನೂ ಕೂಡ ಎಲ್ಲಾ ಜನಾಂಗದವರನ್ನು ಸೇರಿಸಿಕೊಂಡು, ಆಡಳಿತಮುಖ್ಯಸ್ಥರು ಯಾರೇ ಇರಲಿ, ಬಾಕಿಯವರನ್ನು, ಮುಖ್ಯಸ್ಥರನ್ನು ಸರಿಯಾದಂಥ ಕ್ರಮದಲ್ಲಿ ದತ್ತಿ ಇಲಾಖೆ ಸೇರಿಸುವಂತಹ ವ್ಯವಸ್ಥೆಗಳಾಗಬೇಕೆಂದು ನಾನು ಈ ಮೂಲಕ ಒತ್ತಾಯ ಮಾಡುತ್ತೇನೆ, ಅದಲ್ಲದೆ, ಕರ್ನಾಟಕ ಹಿಂದೂ ಧಾರ್ಮಿಕ ದತ್ತಿ ಸಂಸ್ಥೆಗಳ ಅಧಿನಿಯಮ 1997 ಕಾಯಿದೆ, ಕಲಂ 58 ರಂತೆ ಮುಜರಾಯಿ ಅಧಿಕಾರಿಗಳು ಅಧಿಸೂಚಿಸಿದ ಸಂಸ್ಥೆ ಹಾಗೂ ಪೋಷಿತ ಸಂಸ್ಥೆಗಳ ಸಂಬಂಧದಲ್ಲಿ, ಸಂಸ್ಥೆಗೆ ಸೂಕ್ತವಾದ ಸಂಪ್ರದಾಯ ಸಮಾರಂಭ ಆಚರಣೆಯ ಪದ್ಧತಿಗಳಲ್ಲಿ ಹಸ್ತಕ್ಷೇಪ ಮಾಡತಕ್ಕದ್ದಲ್ಲ, ಎನ್ನುವ ವಿಚಾರವನ್ನೂ ಕೂಡ ಸರ್ಕಾರ ಹೇಳುತ್ತಿದೆ, ಆದರೆ ನನಗೆ ಕೊಟ್ಟಂಥ ಉತ್ತರದಲ್ಲಿ ಸರ್ಕಾರದ್ದು ಆ ಯೋಚನೆ ಮಾಡುವುದು ಇಲ್ಲವೆಂದು ನನಗೆನ್ನಿಸುತ್ತದೆ, ಏಕೆಂದರೆ ನನಗೆ ಕೊಟ್ಟಿರುವ ಉತ್ತರದಲ್ಲಿ ಹೇಳಿರುವಂತೆ ಅಲ್ಲಿನ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ, ಪಂಚಾಯಿತಿಯ ತೀರ್ಮಾನದ ಮಾತುಕತೆಯ ಮೂಲಕ ಮಾತ್ರ ಪರಿಹಾರ ಮಾಡಬಹುದೆನ್ನುವ ತೀರ್ಮಾನಕ್ಕೆ ಬಂದಂತೆ ಉತ್ತರವನ್ನು ಕೊಟ್ಟಿದ್ದಾರೆ, ಆದರೆ ಇವತ್ತು ಸರ್ಕಾರ ಆದೇಶ ಹೊರಡಿಸುತ್ತದೆ ತುಂಬಾ ಸಂತೋಷದ ವಿಚಾರ, ಅದನ್ನು ಕಟ್ಟುನಿಟ್ಟಿನಿಂದ ಜಾರಿಗೆ ತರಬೇಕು. ನಾನು ಬಿಲ್ಲವ ಸಮಾಜದ ಬಗ್ಗೆ ಮಾತ್ರ ಹೇಳುತ್ತಿಲ್ಲ, ಎಲ್ಲಾ ಸಮಾಜದಲ್ಲಿ ಯಾರೂ ಕಲಾವಿದರಿದ್ದಾರೆ, ಯಾರು ಯೋಗ್ಯರಿದ್ದಾರೆ ಅವರೆಲ್ಲರಿಗೂ ಕೂಡ ಅನುಕೂಲವಾಗುವಂತೆ ಯಾವುದೇ ದೇವಸ್ಥಾನದ ಹರಕೆ ಬಯಲಾಟದಲ್ಲಿ ಎಲ್ಲರಿಗೂ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಸಚಿವರಲ್ಲಿ ಒತ್ತಾಯಮಾಡುತ್ತಿದ್ದೇನೆ.

ಶ್ರೀ ಲಾಲಾಜಿಸ ಆರ್. ಮೆಂಡನ್(ಕಾಪು) : ನಮ್ಮ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಯಕ್ಷಗಾನ ಕಲಾವಿದರಿಗೆ ಆಗಿರುವ ಸಮಸ್ಯೆಯ ಬಗ್ಗೆ ಈಗಾಗಲೇ ನಮ್ಮ ಶಾಸಕ ಮಿತ್ರರು ಪ್ರಸ್ತಾಪ ಮಾಡಿದ್ದಾರೆ ನಮ್ಮ ಜಿಲ್ಲೆಯಲ್ಲಿ ಮಂದರ್ತಿಮೇಳದ ಕಲಾವಿದರಿಗೆ ಅವಕಾಶದ ನಿರಾಕರಣೆ ಕಳೆದ ಎರಡು ಮೂರು ವರ್ಷಗಳಿಂದ ಬಹಳ ವಿವಾದಾಸ್ಪದವಾಗಿದ್ದು, ಮೊದಲೂ ಕೂಡ ಅದಕ್ಕೆ ಸಂಬಂಧಪಟ್ಟವರು ಆದೇಶವನ್ನು ಹೊರಡಿಸಿದರೂ ಕೂಡ ಅದು ಜಾರಿಗೆ ತಂದಿರಲಿಲ್ಲ. ಈಗ ತೆಗೆದುಕೊಂಡು ಈ ನಿರ್ಧಾರ ಅನುಷ್ಠಾನವಾಗಿ ಅವರಿಗೆ ನ್ಯಾಯ ಒದಗಿಸಬೇಕೆಂದು ತಮ್ಮಲ್ಲಿ ವಿನಂತಿಸುತ್ತಾ ಮುಂದೆ ಇಂತಹ ಯಾವುದೇ ರೀತಿಯ ಸಮಸ್ಯೆ ಬರದಂತೆ, ಉಡುಪಿ, ಮಂಗಳೂರು ಕಾಸರಗೋಡು ಜಿಲ್ಲೆಗಳಲ್ಲೂ

ಕೂಡ 12–20 ಖಾಸಗಿ ಮತ್ತು ದೇವಸ್ಥಾನದ ಯಕ್ಷಗಾನ ಮೇಳಗಳಿವೆ, ಬಯಲಾಟ ಮೇಳಗಳಿವೆ, ಇಂತಹದ್ದರಲ್ಲಿ ಯಾವುದೇ ಒಂದು ಸಮಸ್ಯೆ ಬಾರದೆ, ಎಲ್ಲಾ ಜಾತಿಯವರೂ ಕೂಡ ಕಲಾವಿದರೆಂಬ ದೃಷ್ಟಿಯಿಂದ ಅವರಿಗೆ ಆದ್ಯತೆ ಮತ್ತು ಮಾನ್ಯತೆ ಕೊಡಬೇಕು. ಈ ದೃಷ್ಟಿಯಿಂದ ಸರ್ಕಾರ ಒಳ್ಳೆಯ ಕ್ರಮ ತೆಗೆದುಕೊಂಡು ಅವರೆಲ್ಲರಿಗೂ ನ್ಯಾಯ ಒದಗಿಸಿಕೊಡಬೇಕಾಗಿ ನಾನೂ ಕೂಡ ಕಾಪು ಕ್ಷೇತ್ರದ ಪರವಾಗಿ ಸರ್ಕಾರದಲ್ಲಿ ವಿನಂತಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ನನ್ನ ಸಹೋದ್ಯೋಗಿ ಮಿತ್ರರಾದ ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಸರ್ಕಾರದ ಪರವಾಗಿ ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ, ಸರ್ಕಾರ ನಿಮ್ಮ ಅಭಿಪ್ರಾಯಗಳಿಗೆ ತಲೆಬಾಗಿದೆ ಮತ್ತು ಇಂತಹ ವಿಚಾರಗಳ ಬಗ್ಗೆ ನಾವು ಬಹಳ ಮುಕ್ತಮನಸ್ಸಿನಿಂದ ಇದ್ದೇವೆ ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಈ ವಿಷಯ ತಿಳಿಸಿ ಅದನ್ನು ಬಗೆಹರಿಸುವ ಕಾರಣದಿಂದ ಈಗ ಜಿಲ್ಲಾಧಿಕಾರಿಗಳಾದ ಉಮಾಶಂಕರ್‌ರವರು, ಮಂದರ್ತಿಮೇಳದ ಸಮಸ್ಯೆ ಬಗೆಹರಿದಿದೆ ಎಂದು ಈಗಾಗಲೇ ಪತ್ರಿಕಾ ಹೇಳಿಕೆ ಕೊಟ್ಟಿರುವುದು ವಿಜಯಕರ್ನಾಟಕ, ದಿನಾಂಕ:2.8.04 ರಲ್ಲಿ ಬಂದಿದೆ. ಅದೇನೆಂದರೆ; ಮಂದರ್ತಿ ಶ್ರೀ ದುರ್ಗಾಪರಮೇಶ್ವರಿ ಯಕ್ಷಗಾನ ಮೇಳದಲ್ಲಿ ಬಿಲ್ಲವ ಕಲಾವಿದರಿಗೆ ಮೇಳದಲ್ಲಿ ನಿರಾಕರಣೆ ಸಮಸ್ಯೆ ಬಗೆಹರಿದಿದೆ ಎಂದು ಜಿಲ್ಲಾಧಿಕಾರಿ ಎಸ್.ಆರ್. ಉಮಾಶಂಕರ್‌ರವರು ಹೇಳಿದರು. ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇಳದಲ್ಲಿ ಅವಕಾಶ ಕೋರಿ ಅರ್ಜಿ ಸಲ್ಲಿಸಿದ 12 ಬಿಲ್ಲವ ಕಲಾವಿದರಲ್ಲಿ ಸೂಕ್ತ ಕಲಾವಿದರನ್ನು 2004–05ನೇ ಸಾಲಿನಿಂದ ಮೇಳಕ್ಕೆ ಸೇರ್ಪಡೆಗೆ ದೇವಳದ ಆಡಳಿತ ಮಂಡಳಿ ಭರವಸೆ ನೀಡಿದೆ ಎಂದು ಹೇಳಿದರು. ಜಿಲ್ಲಾಡಳಿತದ ಆದೇಶದಂತೆ ದೇವಸ್ಥಾನದ ಆಡಳಿತ ಮಂಡಳಿ ಮೂರು ದಿನದೊಳಗೆ ಕ್ರಮಕೈಗೊಂಡ ವರದಿ ಸಲ್ಲಿಸುವ ಒಪ್ಪಿಗೆ ನೀಡಿದೆ. ಈ ನಿಟ್ಟಿನಲ್ಲಿ ನಡೆದ ಸೌಹಾರ್ದ ಸಭೆಯಲ್ಲಿ ಬಿಲ್ಲವ ಮಹಾ ಮಂಡಳವೂ ಇದಕ್ಕೆ ಒಪ್ಪಿಗೆ ನೀಡಿದೆ ಎಂದರು. ಮಂದರ್ತಿ ಮೇಳದಲ್ಲಿ ಬಿಲ್ಲವ ಕಲಾವಿದರಿಗೆ ಅವಕಾಶ ನೀಡುವಂತೆ 2004, ಜೂನ್ 29ರಂದು ಸರಕಾರ ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಿದೆ. ದೇವಳದ ಆಡಳಿತ ಮಂಡಳಿಗೆ ಸರ್ಕಾರಿ ಆದೇಶ ಸಹಿತವಾಗಿ ಕ್ರಮ ಕೈಗೊಂಡ ವರದಿ ಸಲ್ಲಿಸಲು ಆದೇಶಿಸಲಾಗಿದೆ ಎಂದು ಹೇಳಿದ್ದಾರೆ. ದೇವಸ್ಥಾನದ ಹೊರಾಂಗಣದಲ್ಲಿ ನಡೆಯುವ ಯಕ್ಷಗಾನವನ್ನು ಕಲಾಸೇವೆ ಎಂದು ಪರಿಗಣಿಸಿ ಎಲ್ಲಾ ಜನಾಂಗದ ಕಲಾವಿದರಿಗೆ ಅವಕಾಶ ನೀಡಲು ಆದೇಶದಲ್ಲಿ ತಿಳಿಸಲಾಗಿದೆ. ಆದುದರಿಂದ ಈ ಸಮಸ್ಯೆ ಬಗೆಹರಿದಿದೆ. ಇದನ್ನು ನಾವು ಮತ್ತೆ ಬೆಳೆಸುವುದಕ್ಕೆ ಅರ್ಥವಿಲ್ಲ.

ಶ್ರೀ ಕೆ. ರಘುಪತಿ ಭಟ್ : ಬರೀ ಈ ದೇವಸ್ಥಾನದಲ್ಲಿ ಮಾತ್ರವಲ್ಲ ಬೇರೆ ಕೆಲವು ಯಕ್ಷಗಾನ ಮೇಳಗಳಲ್ಲಿ ಈ ರೀತಿ ನಡೆಯುವುದಿದೆ ಎಂದು ಸುದ್ದಿ ಇದೆ, ಒಂದು ದೇವಸ್ಥಾನದ ಮಟ್ಟಿಗೆ ಮಾತ್ರವಲ್ಲ, ಎಲ್ಲಾ ದೇವಸ್ಥಾನಗಳ ಮಟ್ಟಿಗೆ ಆದೇಶವನ್ನು

ಹೊರಡಿಸಬೇಕು. ಯಕ್ಷಗಾನ ಮೇಳ ಕಲೆಯಾದ್ದರಿಂದ ಯಾವುದೇ ಒಂದು ಜಾತಿಯ ಬಗ್ಗೆ ತಾರತಮ್ಯ ತೋರಿಸುವುದು ಸೂಕ್ತವಲ್ಲವೆಂಬ ಆದೇಶವನ್ನು ಹೊರಡಿಸುವುದೆಂದು ನನ್ನ ಸಲಹೆಯನ್ನು ಕೊಡುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಇದು ನೇರವಾಗಿ ಮಂದರ್ತಿ ಮೇಳಕ್ಕೆ ಸಂಬಂಧಿಸಿದ ವಿಷಯ ಅದನ್ನು ಬಗೆಹರಿಸಿದ್ದೇವೆ, ಸರ್ಕಾರ ತೆಗೆದುಕೊಂಡ ಈ ನಿರ್ಣಯವನ್ನು ತಾವು ಅಭಿನಂದಿಸಬೇಕಾಗಿತ್ತು, ನೀವು ಅಭಿನಂದಿಸಿಲ್ಲ, ಕಾನೂನು ಇತ್ಯಾದಿಗಳನ್ನು ನೋಡಿದರೆ ಸರಿಹೋಗುವುದಿಲ್ಲವೆನ್ನುವ ಕಾರಣಕ್ಕಾಗಿಯೇ ಜಿಲ್ಲಾಡಳಿತಗಳನ್ನು ಚುರುಕುಗೊಳಿಸಿ ಇದನ್ನೆಲ್ಲಾ ಬಗೆಹರಿಸಿದ್ದೇವೆ, ಬಹಳ ಸೂಕ್ಷ್ಮವಾದ ವಿಚಾರಗಳಿರುತ್ತವೆ, ಬೇರೆ ಕಡೆಗಳಲ್ಲಿರುವ ಇಂತಹ ಪ್ರಕರಣಗಳನ್ನು ನಮ್ಮ ಗಮನಕ್ಕೆ ತನ್ನಿ ಸಾರ್ವತ್ರಿಕವಾದ ಆಜ್ಞೆಯನ್ನು ಮಾಡುತ್ತೇವೆ.

ಶ್ರೀ ಕೆ. ರಘುಪತಿ ಭಟ್ : ಈ ನಿಲುವನ್ನು ಸ್ವಾಗತ ಮಾಡುತ್ತಿದ್ದೇವೆ.

(IV) ವಿಷಯ : ಮಾಹಿತಿಸಿಂಧು ಯೋಜನೆಯಡಿ ಕಂಪ್ಯೂಟರ್ ಶಿಕ್ಷಕರಿಗೆ ಆಗಿರತಕ್ಕಂಥ ಅನ್ಯಾಯ ಮತ್ತು ಅದರಲ್ಲಾಗಿರುವ ಅವ್ಯವಹಾರದ ಬಗ್ಗೆ.

† **ಶ್ರೀ ಸಿ.ಟಿ. ರವಿ(ಚಿಕ್ಕಮಗಳೂರು)** : ಮಾನ್ಯ ಅಧ್ಯಕ್ಷರೆ, ಮಾಹಿತಿ ಸಿಂಧು ಯೋಜನೆಯಡಿ ಕಂಪ್ಯೂಟರ್ ಶಿಕ್ಷಕರಿಗೆ ಆಗಿರತಕ್ಕಂಥ ಅನ್ಯಾಯ ಮತ್ತು ಅದರಲ್ಲಾಗಿರುವ ಅವ್ಯವಹಾರದ ಬಗ್ಗೆ ಸರ್ಕಾರದ ಗಮನ ಸೆಳೆಯುವುದಕ್ಕೆ ಇಚ್ಛಿಸುತ್ತೇನೆ.

† **ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)**: ಮಾನ್ಯ ಅಧ್ಯಕ್ಷರೇ ಬಹಳ ದೊಡ್ಡದಾದ ಉತ್ತರವಿದೆ, ಐದು ಪುಟಗಳಷ್ಟು ಉತ್ತರವಿದೆ. ಅದು ಅವರಿಗೇ ಸಂಬಂಧಪಟ್ಟ ವಿಚಾರವಾಗಿರುವುದರಿಂದ ತಾವು ಇದನ್ನು ಓದಿದ್ದೇನೆ ಎಂದು ಭಾವಿಸಬೇಕು. ಈ ಉತ್ತರವನ್ನು ಅವರಿಗೆ ಕಳುಹಿಸಿಕೊಡುತ್ತೇನೆ. ಅದರಿಂದ ಸಮಯ ಕೂಡ ಉಳಿಯುತ್ತದೆ ಎಂದು ಭಾವಿಸಿಕೊಂಡಿದ್ದೇನೆ. ಇದನ್ನು ನೋಡಿಕೊಂಡು ತಾವು ಏನಾದರೂ ಸ್ಪಷ್ಟೀಕರಣ ಕೇಳುವುದಿದ್ದರೆ ನಾಳೆ ಕೇಳಬಹುದು ಈಗ ಸಮಯವಿರದಿದ್ದರೆ. ಈಗಾಗಲೇ ಉತ್ತರ ಕಳುಹಿಸಿಕೊಟ್ಟಿದ್ದೇನೆ. ಆಗಬಹುದಾ ರವಿಯವರೇ ?

ರಾಜ್ಯದಲ್ಲಿ 1000 ಸರ್ಕಾರಿ ಪ್ರೌಢಶಾಲೆಗಳಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಮಾಹಿತಿ ಸಿಂಧು ಯೋಜನೆಯನ್ನು ಕಳೆದ $2^1/_2$ ವರ್ಷಗಳಿಂದ ಅನುಷ್ಠಾನಗೊಳಿಸಲಾಗುತ್ತಿದ್ದು. ಈ ಕಾರ್ಯವನ್ನು ಟರ್ನ್ ಕೀ ಲೀಸ್ ಆಧಾರದ ಮೇರೆಗೆ ನಿರ್ವಹಣಾ ಸಂಸ್ಥೆಗಳಾದ ಎನ್.ಐ.ಐ.ಟಿ. ಆಪ್ಟೆಕ್. ಮತ್ತು ಎಡುಕಾಂಪ್ ಡಾಟಾ ಮ್ಯಾಟಿಕ್ಸ್ ಲಿಮಿಟೆಡ್‌ಗಳು ಕ್ರಮವಾಗಿ 700,250 ಹಾಗೂ 50 ಶಾಲೆಗಳಲ್ಲಿ ಅನುಷ್ಠಾನ ಕಾರ್ಯನಿರ್ವಹಿಸುತ್ತಿರುತ್ತಾರೆ.

ಕರ್ನಾಟಕ ಪಾರದರ್ಶಕತೆ ಅಧಿನಿಯಮ 1999 ಅನ್ವಯ ಟರ್ನ್ ಕೀ ಲೀಸ್ ಆಧಾರದ ಮೇರೆಗೆ ಯೋಜನೆಯ 05 ವರ್ಷಗಳ ಅವಧಿಯಲ್ಲಿ ಆಯ್ಕೆ ಮಾಡಲಾಗುವ ಶಾಲೆಗಳಲ್ಲಿ 8.9.10ನೇ ತರಗತಿ ವಿದ್ಯಾರ್ಥಿಗಳಿಗೆ ಕಂಪ್ಯೂಟರ್